ದಿನಾಂಕ **09.04.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಪಾಟಿ ಸವಾಲು ಃ ಪ್ರತಿವಾದಿ ಪರ ವಕೀಲರಿಂದ

ನನ್ನ ತಾತನ ಮೂಲ ಸ್ಥಳ ಚನ್ನರಾಯಪಟ್ಟಣ. ನನ್ನ ತಂದೆಗೆ ಚನ್ನರಾಯಪಟ್ಟಣದಲ್ಲಿ ಯಾವುದೇ ಪಿತ್ರಾರ್ಜಿತ ಆಸ್ತಿಗಳು ಇರುವುದಿಲ್ಲ. ಬಾಗೂರಿಗೆ ಬಂದ ನಂತರ ಹೋಟೆಲ್ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ. ಬಾಗೂರಿನಲ್ಲಿ ಅವರು ಸ್ವಂತವಾಗಿ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸ್ವತ್ತು ಹರಾಜಿನಲ್ಲಿ ಕೊಂಡುಕೊಂಡಿದ್ದು ಎಂದರೆ ಸರಿ. ಶಾಂತ ಮತ್ತು ಶ್ರೀನಿವಾಸ ಹಿರಿಯ ಪತ್ನಿಯ ಮಕ್ಕಳು ಎಂದರೆ ಸರಿ. ನನ್ನ ತಾಯಿಯನ್ನು ಮದುವೆ ಆಗುವುದಕ್ಕೆ ಮುಂಚೆ ನನ್ನ ತಂದೆಗೆ ಗದ್ದೆ ಮತ್ತು ಒಂದು ಮನೆ ಇತ್ತು. ಶ್ರೀನಿವಾಸ ನನ್ನ ಅಣ್ಣ ಎಂದರೆ ಸರಿ. ಅವರು Marketing fedration ಅಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ . ನಂತರ ಅವರನ್ನು ಅಲ್ಲಿಂದ ಕೆಲಸದಿಂದ ತೆಗೆದು ಹಾಕಿದ್ದು ನಂತರ ಲಾರಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಆ ಲಾರಿ ಅಪಘಾತವಾಗಿ ಭಾರಿ ನಷ್ಟ ಆಗಿರುತ್ತದೆ ಎಂದರೆ ಸರಿ. 10 ಗುಂಟೆ ಮಾರಿ ಅವರ ಕಷ್ಟವನ್ನು ತೀರಿಸಿರುತ್ತಾರೆ. ಅವಗಿದಿದ್ದ ಸ್ವಲ್ಪ ಗದ್ದೆಯನ್ನು ಮಾರಾಟ ಮಾಡಿ ನಮಗೆಲ್ಲಾ ಹಣವನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪರವರು ಚನ್ನರಾಯಪಟ್ಟಣದ ಆಸ್ತಿಯ ಮೇಲೆ ಹಿಸ್ಸೆಯ ದಾವೆಯನ್ನು ಹಾಕಿರುತ್ತಾರೆ ಎಂದರೆ ಸರಿ. ಅದರಲ್ಲಿ ನನ್ನ ತಂದೆಯವರನ್ನು ಪಕ್ಷಕಾರರನ್ನಾಗಿ ಮಾಡಿರುತ್ತಾರೆ ಎಂದರೆ ಸರಿ. ಅದು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಯಾಗಿದ್ದು ಅದರಲ್ಲಿ ಯಾರಿಗೂ ಆಸ್ತಿಯ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ವಯಸ್ಸಾದ ನಂತರ ನಾಗೇಂದ್ರ ರವರ ಜೊತೆ ವಾಸ ಮಾಡುತ್ತಿದ್ದರು ಎಂದರೆ ಸರಿ. ಸಂಪೂರ್ಣ ನಿಗಾವಣೆಯನ್ನು ನಾಗೇಂದ್ರರವರೇ ಮಾಡುತ್ತಿದ್ದರು ಎಂದರೆ ಸ್ವಲ್ಪ ದಿನಗಳ ಮಟ್ಟಿಗೆ ನೋಡುತ್ತಿದ್ದಾರೆ ಮುಂಚೆ ಎಲ್ಲಾರು ನೋಡಿಕೊಳ್ಳುತ್ತಿದ್ದೇವು ಎಂದು ನುಡಿಯುತ್ತಾರೆ. ನಾಗೇಂದ್ರರವರು

ಚನ್ನರಾಯಪಟ್ಟಣದಲ್ಲಿ ಶ್ರೀನಿವಾಸ ಮತ್ತು ವೆಂಕಟೇಶ ಮತ್ತು ಶಾಂತ ಬೆಂಗಳೂರಿನಲ್ಲಿ ವಾಸ, ರವಿಕುಮಾರ ಹಾಸನದಲ್ಲಿ ವಾಸ, ನಾನು ನನ್ನ ಪತಿಯ ಮನೆಯಲ್ಲಿ ವಾಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬೆಂಗಳೂರಿನಲ್ಲಿ ಕೂಲಿ ಕೆಲಸ ಮಾಡುತ್ತಿದ್ದೇನೆ. ನನ್ನ ತಂಗಿ ಅವರ ಪತಿಯ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ ಎಂರದೆ ಸರಿ. ನನ್ನ ತಂದೆ ತಾಯಿಯವರನ್ನು ವಯಸ್ಸಾದ ಕಾಲದಲ್ಲಿ ನಾಗೆಂದ್ರರವರು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. ನನ್ನ ತಾಯಿ ನಾಗೇಂದ್ರ ರವರ ಮನೆಯಲ್ಲಿ ವಾಸಿಸುತ್ತಿದ್ದಾರೆ ಎಂದರೆ ಸರಿ. ಪ್ರತಿವಾದಿ ನಂ. 1 ರವರು ನಾಗೇಂದ್ರರವರ ಮನೆಯಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ತಿಥಿ ಕಾರ್ಯಗಳನ್ನು ನಾಗೇಂದ್ರರವರೇ ಮಾಡಿದರು ಎಂದರೆ ಸರಿಯಲ್ಲ. ನನ್ನ ತಂದೆಯವರು ನನ್ನ ತಾಯಿಯ ಹೆಸರಿಗೆ ದಾನ ಪತ್ರ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾಗೇಂದ್ರರವರ ಮಗನಾದ ಸ್ಕಂದ ಹೆಸರಿಗೆ ದಾನ ಪತ್ರ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿಯವರನ್ನು ನಾಗೇಂದ್ರರವರೇ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. ದಾವಾ ಸ್ವತ್ತುಗಳು ನನ್ನ ತಂದೆಯವರು ಸ್ವಯಾರ್ಜಿತವಾದ ಕಾರಣ ನಮಗೆ ಭಾಗ ಕೇಳಲು ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಅದು ನನ್ನ ತಾತನ ಸ್ವತ್ತು ಎಂದು ರುಜುವಾತು ಮಾಡಲು ದಾಖಲಾತಿಗಳನ್ನು ಹಾಜರು ಪಡಿಸಿರುತ್ತೇನೆ. ನಾವು ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.